ಅಸಲು ದಾವಾ ನಂ.05/2021
ಪಿ ಡಬ್ಲ್ಯು-1

ದಿನಾಂಕಃ 28-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ. ಎಫ್ ಎನ್ ಎನ್ ವಕೀಲರಿಂದ.**

ನಾನು ಸರ್ವೆ ನಂ.31/6 ಹಾಗೂ ಒಂದು ಮನೆಯ ಆಸ್ತಿಯ ಸಂಬಂಧ ಈ ದಾವೆ ಸಲ್ಲಿಸಿರುತ್ತೇನೆ. ಮನೆಯ ಆಸ್ತಿಯ ಅಳತೆ ಹೇಳಲು ಬರುವುದಿಲ್ಲ. ಸಾಕ್ಷಿ 2 ವರೆ ಗುಂಟೆ ಆಸ್ತಿ ತನ್ನ ಹೆಸರಿನಲ್ಲಿ ಇರುವುದಾಗಿ ನುಡಿಯುತ್ತಾರೆ. ಆ 2 ವರೆ ಗುಂಟೆ ಮನೆ ಮತ್ತು ಖುಲ್ಲಾ ಜಾಗೆ ಒಳಗೊಂಡಿರುತ್ತದೆ. ದಾವಾ ಆಸ್ತಿಯ ಅಳತೆ ವಾದ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿ. ಮನೆ ಎಷ್ಟು ಕ್ಷೇತ್ರ ಹಾಗೂ ಖುಲ್ಲಾ ಜಾಗೆ ಎಷ್ಟು ಕ್ಷೇತ್ರ ಒಳಗೊಂಡಿರುತ್ತದೆ ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿ ಉತ್ತರಿಸುತ್ತಿಲ್ಲ. ಹಾಗೇ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

2. ಪ್ರತಿವಾದಿಯ ತಂದೆ ಹನುಮಂತಪ್ಪ ಯಾವಾಗ ತೀರಿಕೊಂಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಹನುಮಂತಪ್ಪನಿಂದ ಪ್ರತಿವಾದಿಗೆ ಬಂದ ಬಗ್ಗೆ ಕಾಗದ ಪತ್ರ ಹಾಜರುಪಡಿಸಿಲ್ಲ. ನಾನು ಮತ್ತು ನನ್ನ ಮಕ್ಕಳು ಹತ್ತಿಮತ್ತೂರು ಗ್ರಾಮದಲ್ಲಿ ವಾಸವಿರುತ್ತೇವೆ ಎಂದರೆ ಸರಿ. ಹಾಗೇ 2015 ರಿಂದ ವಾಸವಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ 2017-2018 ರಲ್ಲಿ ವಾಸವಿರುವುದಾಗಿ ನುಡಿಯುತ್ತಾರೆ. ದಾವಾದ ಆಸ್ತಿಗಳು ಪ್ರತಿವಾದಿ ಹಾಗೂ ಆತನ ಅಣ್ಣ ರೇವಣಪ್ಪ ಇವರ ಸ್ವಸಂಪಾದಿತ ಆಸ್ತಿಗಳು ಎಂದರೆ ಸರಿಯಲ್ಲ. ಹಾಗೇ ಪ್ರತಿವಾದಿ ಖರೀದಿ ಹಿಡಿಯುವಾಗ ಸರ್ವೆ ನಂ.31/1+2 ಬ/2 ಕ್ಷೇತ್ರ 10 ಎಕರೆ 36 ಗುಂಟೆ ಇತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿ

ಮತ್ತು ರೇವಣಪ್ಪ ಪಾಲು ಮಾಡಿಕೊಂಡ ನಂತರ ಅದು ಸರ್ವೇ ನಂ.31/6 ಕ್ಷೇತ್ರ 5 ಎಕರೆ 37 ಗುಂಟೆ ಆಯಿತು ಎಂದರೆ ಸರಿಯಲ್ಲ. 1993-1999 ರವರೆಗೆ ಸದರಿ ಆಸ್ತಿಯ ಸರ್ವೇ ನಂ. 31/1+2 ಬ/2 ಕ್ಷೇತ್ರ 10 ಎಕರೆ 36 ಗುಂಟೆ ಇತ್ತು ಎಂದರೆ ಸರಿಯಲ್ಲ. ಸದರಿ ಉತಾರಗಳಲ್ಲಿ ಪಾಲುಗಾರಿಕೆಯ ಮೂಲಕ ಕಬ್ಜೆ ಇರುವುದಾಗಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

3. ಗ್ರಾಮ ಪಂಚಾಯತ್ ಆಸ್ತಿ ಪ್ರತಿವಾದಿ ಮತ್ತು ಆತನ ಸಹೋದರ ರೇವಣಪ್ಪನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅವರು ತಮ್ಮ ತಮ್ಮಲ್ಲಿ ಪಾಲು ಮಾಡಿಕೊಂಡಿದ್ದರಿಂದ ಆಸ್ತಿ ನಂ.301/1 ಮತ್ತು 301/2 ಅಂತಾ ಆಗಿರುತ್ತವೆ ಎಂದರೆ ಸರಿಯಲ್ಲ. 301/2 ಆಸ್ತಿ ನನ್ನ ಹೆಸರಿನಲ್ಲಿ ಇರುತ್ತದೆ. ನಾವು ಮನೆ ಕಟ್ಟುವಾಗ ಸದರಿ ಆಸ್ತಿಯು ನಮಗೆ ಬಂದಿರುತ್ತದೆ. ಪ್ರತಿವಾದಿ ನನ್ನ ಹೆಸರಿಗೆ ಸದರಿ ಆಸ್ತಿಯನ್ನು ನೋಂದಾಯಿತ ದಸ್ತಾವೇಜಿನ ಮೇರೆಗೆ ಬರೆದು ಕೊಟ್ಟಿಲ್ಲ. ನಾನು ಪಂಚಾಯತಿ ಅಧಿಕಾರಿಗಳನ್ನು ಸಂಗನಮತ ಮಾಡಿಕೊಂಡು ಪ್ರತಿವಾದಿಗೆ ಗೊತ್ತಾಗದಂತೆ ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಹಚ್ಚಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಆಸ್ತಿಯು ಸಹ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಮಗೆ ಏನು ಹಕ್ಕು ಇಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿ ನನ್ನ ಮೇಲೆ ವಿವಾಹ ವಿಚ್ಛೇಧನ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಹಾಗೇ ಅರ್ಜಿ ಸಲ್ಲಿಸಿದ ನಂತರ ನಾನು ಪ್ರತಿವಾದಿಯ ಆಸ್ತಿಗಳನ್ನು ಪಿತ್ರಾರ್ಜಿತ ಆಸ್ತಿಗಳು ಅಂತಾ ತೋರಿಸಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ನಾನು ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನಾನು ಸುಳ್ಳು ವ್ಯಾಜ್ಯ ಕಾರಣ ತೋರಿಸಿ ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿರುತ್ತೇನೆ ಎಂದರೆ

ಅಸಲು ದಾವಾ ನಂ.05/2021
ಪಿ ಡಬ್ಲ್ಯು-1

ಸರಿಯಲ್ಲ. ದಾವಾದ ಆಸ್ತಿಗಳು ಪ್ರತಿವಾದಿಯ ಸ್ವಸಂಪಾದಿತ ಆಸ್ತಿಗಳು ಇರುವುದರಿಂದ ಅವುಗಳಲ್ಲಿ ನಮಗೆ ಏನು ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).